**5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.**

---

**ಸಿ.ಸಿ. ನಂ.** ಃ 2133/2018 ದಿನಾಂಕಃ 18.03.2021.

**ಪಿ.ಡಬ್ಲ್ಯೂ** ಃ 01

---

**ಃಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತುಃ**

**ಹೆಸರು ಃ ನಯ್ಯರ ಹಿಸಾಮುದ್ದಿನ್ ಮುಲ್ಲಾ**

**ವಯಸ್ಸು ಃ 55 ವರ್ಷ**

**ಉದ್ಯೋಗ ಃ ಬ್ಯಾಂಕ್ ವ್ಯವಸ್ಥಾಪಕ**

**ವಾಸ ಃ ಅಥಣಿ, ತಾ ಅಥಣಿ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

**ಮುಖ್ಯ ವಿಚಾರಣೆಃ** ಪಿರ್ಯಾದಿ ಪರ ವಕೀಲರಾದ ಶ್ರೀ ಬಿ ಐ ಡಿ ರವರಿಂದಃ

ನಾನು ನ್ಯಾಯಾಲಯಕ್ಕೆ ಪಿರ್ಯಾದಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡ ರೀತಿಯಲ್ಲಿ ನಿಶಾನೆಗಳಾಗಿ ಗುರುತಿಸಲಾಯಿತು.

ಆರೋಪಿಯು ಪಿರ್ಯಾದಿ ಸೊಸೈಟಿಗೆ ನೀಡಿದ ಚೆಕ್ ನಂ. 639341, ರೂ.22,26,874/ ರೂಪಾಯಿಗಳ ಚಕ್ ನ್ನು ನಿಶಾನೆ ಪಿ.1 ಎಂದು, ಪಿರ್ಯಾದಿಯು ನಿಶಾನೆ ಪಿ.1 ರಲ್ಲಿನ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ.1(ಎ) ಎಂದು, ಚಲನ್ ಪ್ರತಿಯನ್ನು ನಿಪಿ 2 ಎಂದು, ಬ್ಯಾಂಕಿನ ಹಿಂಬರಹವನ್ನು ನಿಶಾನೆ ಪಿ 3 ಎಂದು, ಆರೋಪಿಗೆ ನೀಡಿದ ಲೀಗಲ್ ನೋಟೀಸಿನ ಕಛೇರಿ ಪ್ರತಿಯನ್ನು ನಿಶಾನೆ ಪಿ.4 ಎಂದು, ಅಂಚೆ ರಸೀದಿಯನ್ನು ನಿಶಾನೆ ಪಿ.5 ಎಂದು, ಅಂಚೆ ಸ್ವೀಕೃತಿಯ ಹಿಂಬರಹವನ್ನು ನಿಶಾನೆ ಪಿ. 6 ಎಂದು, ಸೊಸೈಟಿಯ ದಿಃ05.04.2018 ರ ಠರಾವಿನ ದೃಢೀಕೃತ ಪ್ರತಿಯನ್ನ ನಿ.ಪಿ.7 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪಿರ್ಯಾದಿಯು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ. ಇದೆ.**

**(ಚನ್ನಬಸಪ್ಪ ಆರ್. ಕೂಡಿ)**

**5 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**

**ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.**